ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಈ ದಿವಸ ಆದ ರೈಲು ದುರ್ಘಟನೆ ಬಗ್ಗೆ ನಮ್ಮ ಮಾನ್ಯ ಸದಸ್ಯರು ಕಳಕಳಿ ವ್ಯಕ್ತಪಡಿಸಿದರು. ನಾನು ಪೋಲೀಸ್ ಕಮೀಷನರ್‌ರವರನ್ನು ಕಾಂಟಾಕ್ಟ್ ಮಾಡಿ ಇನ್‌ಫರ್‌ಮೇಷನ್ ತೆಗೆದುಕೊಂಡು ಬಂದಿದ್ದೇನೆ. I have received the following message from him.

"This morning at about 7.45 AM when the Udyan Express was arriving near Yelahanka, the engine went out of track and 5 bogies jammed and damaged. The rescue operations are in full swing with all the officers of the Department present there. The medical team is supervising the operation. So far, three bodies have been recovered by cutting the bogies. Some more deaths are suspected. Detailed message follows."

This is the message I have received from the office of the Police Commissioner, Bangalore.

ಗಮನ ಸೆಳೆಯುವ ಸೂಚನೆಗಳು

1. ರಾಜ್ಯದಲ್ಲಿ ಕೊಳಚೆ ಬಾವಿಗಳ ನೀರಿನಲ್ಲಿ ಪಾಷಣ ಏನಾದರೂ ಸೇರಿದರೆ ಪರೀಕ್ಷಿಸುವುದು

ಶ್ರೀಮತಿ ಪ್ರಮೀಳಾ ನೇಸರ್ಗಿ : ರಾಜ್ಯದಲ್ಲಿರುವ ಎಲ್ಲಾ ಕೊಳವೆ ಬಾವಿಗಳನ್ನು ಹಾಗೂ ಅಲ್ಲಿರುವ ನೀರಲ್ಲಿ ಪಾಷಣ ಏನಾದರೂ ಸೇರಿದೆಯೇ ಎಂಬುದನ್ನು ಕೂಡಲೇ ಪರೀಕ್ಷಿಸುವ ಅಗತ್ಯದ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಅಲ್ಲಿರುವ ಕೊಳವೆಬಾವಿಗಳಲ್ಲಿ ಕೊಳವೆಗಳು ತುಕ್ಕು ಹಿಡಿದಿರುವುದರಿಂದ ನೀರು ಕುಡಿಯಲಿಕ್ಕೆ ಅನಾರೋಗ್ಯಕರವಾಗಿದೆ ಎಂಬತಕ್ಕಂಥ ವಿಚಾರದ ಬಗ್ಗೆ ಅವರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಇಲ್ಲಿಯವರೆಗೂ ಕೂಡ ಇಂತಹ ಯಾವುದೇ ತರಹದ ಪ್ರಕರಣಗಳ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲ, ಅಕಸ್ಮಾತ್ ಆ ರೀತಿಯ ನಿರ್ದಿಷ್ಟ ಪ್ರಕರಣಗಳು ಬಂದರೆ, ದಯವಿಟ್ಟು ಅದರ ಬಗ್ಗೆ ಮಾಹಿತಿ ಕೊಟ್ಟರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಸಭಾಧ್ಯಕ್ಷರೇ, ಈ ವಿಷಯವನ್ನು ವಿತಕ್ಕೋಸ್ಕರ ತಮ್ಮ ಗಮನಕ್ಕೆ ತಂದಿದ್ದೇನೆ ಎಂದರೆ, ಇವತ್ತು ಪಶ್ಚಿಮ ಬಂಗಾಲದಲ್ಲಿ ಮೂರು ಜಿಲ್ಲೆಗಳಲ್ಲಿ ಏನಾಗಿದೆ ಎಂಬುದು ಪ್ರಾಯಶಃ ನಮ್ಮ ಕರ್ನಾಟಕದಲ್ಲಿ ಇರತಕ್ಕಂಥ ಮಂತ್ರಿಗಳ ಗಮನಕ್ಕೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ; ಆ ರಾಜ್ಯದ ಮೂರು ಜಿಲ್ಲೆಗಳಲ್ಲಿ ಕೊಳವೆ ಬಾವಿಗಳ ನೀರು ಹೆಚ್ಚು ಅನಾರೋಗ್ಯಕರವಾಗಿದ್ದು ನೀರಿನ ಪ್ರಮಾಣ ಹೆಚ್ಚಾಗಿ ಉಪಯೋಗಿಸುವಂತಹ ಸಂದರ್ಭದಲ್ಲಿ ಭೂಮಿಯ ಕೆಳಗೆ ಇರತಕ್ಕಂಥ ಅರ್‌ಸನಿಕ್ ಎಂಬ ಪಾಷಾಣ ಏನು ಇದೆ ಅದು ನೀರಿನ ಜೊತೆಯಲ್ಲಿ ಸೇರಿಕೊಂಡು ಇವತ್ತು ಮೂರು ಕೋಟಿ ಜನ ಪಶ್ಚಿಮ ಬಂಗಾಳದಲ್ಲಿ ಈ ಒಂದು ಅನಾರೋಗ್ಯಕ್ಕೆ ತುತ್ತಾಗಿದ್ದಾರೆ. ಹೀಗಾಗಿ ಕರ್ನಾಟಕದಲ್ಲಿರತಕ್ಕವರು ಅದರ ಬಗ್ಗೆ ಸೂಕ್ತವಾದ ಗಮನಕೊಡಬೇಕಾದ ಅವಶ್ಯಕತೆ ಹೆಚ್ಚಾಗಿದೆ. ಆದ್ದರಿಂದ ನಾನು ತಮ್ಮ ಗಮನ ಸೆಳೆಯುವುದೇನೆಂದರೆ, ಇಡೀ ಕರ್ನಾಟಕದಲ್ಲಿ ಇರತಕ್ಕಂಥ ಕೊಳವೆಬಾವಿಗಳ ನೀರನ್ನು ಪರೀಕ್ಷೆ ಮಾಡಿ ಆ ರೀತಿ ಏನಾದರೂ ಪಾಷಾಣದಲ್ಲಿ

ಸೇರಿದೆಯೇ, ಜನರಿಗೆ ಅನಾರೋಗ್ಯ ಬರತಕ್ಕಂಥ ಪರಿಸ್ಥಿತಿ ಬಂದಿದೆಯೇ ಇದನ್ನು ಪರೀಕ್ಷೆ ಮಾಡಬೇಕಾದಂಥ ಅಗತ್ಯ ಹೆಚ್ಚಾಗಿ ಇವತ್ತು ಇದೆ. ಅದಕ್ಕೋಸ್ಕರ ತಮ್ಮ ಗಮನವನ್ನು ಸೆಳೆದಿದ್ದೇನೆ. ತಾವುಗಳು ಆ ಕಡೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಕಳಕಳಿ ನಿಜವಾಗಿಯೂ ಯೋಗ್ಯವಾದುದು. ಪಶ್ಚಿಮ ಬಂಗಾಳ ರಾಜ್ಯದಲ್ಲಿ ಆಗಿರತಕ್ಕಂತಹ ಪ್ರಕರಣದ ರೀತಿಯಲ್ಲಿ ಕರ್ನಾಟಕದಲ್ಲೂ ಆಗಬೇಕೆಂದೇನೂ ಇಲ್ಲ. ನಮ್ಮಲ್ಲಿರತಕ್ಕಂತಹ ಮಾಹಿತಿ ಪ್ರಕಾರ ಕರ್ನಾಟಕದಲ್ಲಿನ ಕೊಳವೆ ಬಾವಿಗಳಲ್ಲಿ ಪಾಷಾಣ ಸೇರಿಲ್ಲ. ಆದರೆ ಮಾನ್ಯ ಸದಸ್ಯರ ಸೂಚನ ನಿಜವಾಗಿಯೂ ಗಮನಾರ್ಹವಾಗಿರುವಂಥಾದ್ದು. ನಾನು ಖಂಡಿತ ಈ ಬಗ್ಗೆ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿ ಅಂತಹ ಪ್ರಕರಣಗಳೇನಾದರೂ ಇದ್ದಲ್ಲಿ ಅದನ್ನು ಸರಿಪಡಿಸುವ ವ್ಯವಸ್ಥೆ ಮಾಡುತ್ತೇನೆ.

2. ತುಮಕೂರು ಜಿಲ್ಲೆಯಲ್ಲಿ ಸರಿಯಾಗಿ ಮಳೆ ಬೀಳದೇ ಕುಡಿಯುವ ನೀರಿನ ತೀವ್ರ ಅಭಾವ ಉಂಟಾಗಿದ್ದು ತುಮಕೂರು ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸುವ ಬಗ್ಗೆ

ಶ್ರೀ ಎಸ್.ಪಿ. ಮುದ್ದ ಹನುಮೇಗೌಡ (ಕುಣಿಗಲ್) : ಸನ್ಮಾನ್ಯ ಸಭಾಧ್ಯಕ್ಷರೇ, ತುಮಕೂರು ಜಿಲ್ಲೆಯಲ್ಲಿ ಸರಿಯಾಗಿ ಮಳೆ ಬೀಳದೇ ಕುಡಿಯುವ ನೀರಿನ ತೀವ್ರ ಅಭಾವ ಉಂಟಾಗಿದ್ದು, ತುಮಕೂರು ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಸರಾಸರಿ ತುಮಕೂರು ಜಿಲ್ಲೆಯೊಳಗೆ 536 ಮಿಲಿ ಮೀಟರ್.....

ಅಧ್ಯಕ್ಷರು : ಯಾವ ವಿಷಯದ ಬಗ್ಗೆ ಅವರು ಗಮನ ಸೆಳೆಯುತ್ತಿರುವುದು? ಕುಡಿಯುವ ನೀರಿನ ಅಭಾವ ಅಂತೀರಿ, ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಬೇಕು ಅಂತೀರಿ. ಕುಡಿಯುವ ನೀರಿನ ಅಭಾವಕ್ಕೂ ಬರಗಾಲ ಪ್ರದೇಶವೆಂದು ಘೋಷಿಸುವುದಕ್ಕೂ ಏನು ಸಂಬಂಧ?

ಶ್ರೀ ಆರ್.ಎಲ್. ಜಾಲಪ್ಪ : ತುಮಕೂರು ಜಿಲ್ಲೆಯಲ್ಲಿ ಸರಾಸರಿ ಮಳೆಯು 536.2 ಮಿಲಿ ಮೀಟರ್ ಇದ್ದು 1994ರಲ್ಲಿ ಇದುವರೆಗೆ 478.5 ಮಿಲಿ ಮೀಟರ್ ಮಳೆ ಮಾತ್ರ ಬಿದ್ದಿರುತ್ತದೆ. ಈ ಕಾರಣದಿಂದ ಜಿಲ್ಲೆಯಲ್ಲಿರುವ ಕೆರೆಗಳಲ್ಲಿ ಸಾಕಷ್ಟು ನೀರು ಶೇಖರಣೆಯಾಗಿರುವುದಿಲ್ಲ. ಈಗ ನೀರಿನ ಬಗ್ಗೆ ಯಾವ ತೊಂದರೆಯೂ ಇರುವುದಿಲ್ಲ. ಹಾಗೂ ಕುಡಿಯುವ ನೀರಿನ ಬಗ್ಗೆಯೂ ಸಧ್ಯದಲ್ಲಿ ತೀವ್ರ ಅಭಾವ ಕಂಡು ಬಂದಿಲ್ಲ.

ತುಮಕೂರು ಜಿಲ್ಲೆಗೆ ಇದುವರೆಗೂ ಕುಡಿಯುವ ನೀರಿನ ಪೂರೈಕೆಗಾಗಿ ಚಾಲ್ತಿ ಸಾಲಿನಲ್ಲಿ ದಿನಾಂಕ 1.4.94 ರಿಂದ 3.11.94ರವರೆಗೆ 112.50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲ್ಕಂಡ ಕಾರಣಗಳಿಂದಾಗಿ ತುಮಕೂರು ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಲು ಯಾವ ಸಮರ್ಥನೀಯ ಕಾರಣಗಳೂ ಇರುವುದಿಲ್ಲ.

ಸನ್ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆಯೊಳಗೆ ಮಳೆ ಸರಿಯಾಗಿ ಬಂದಿಲ್ಲ. ಆದುದರಿಂದ ಕುಡಿಯುವ ನೀರಿಗೆ ತೀವ್ರ ಅಭಾವ ಉಂಟಾಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಸಾಧಾರಣವಾಗಿ ವರ್ಷಕ್ಕೆ ಸರಾಸರಿ 536ಮಿಲಿ ಮೀಟರ್‌ನಷ್ಟು ಮಳೆಯಾಗಿದೆ. ಕಡ್ಲೇಕಾಯಿ ಬೆಳೆಗೆ ಸ್ವಲ್ಪ ತೊಂದರೆಯಾಗಿದೆ.